## ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 1644 /2022

ಪ್ರಾಸಾ–4, ಚಾಸಾ–10

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವಯ್ಯ ಬಿ |
| ತಂದೆಯ ಹೆಸರು | : | ಮಲ್ಲಯ್ಯ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮುಖ್ಯ ಪೇದೆ ಪೂರ್ವ ಪೋಲಿಸ್ ಠಾಣೆ |
| ವಾಸ | : | ಚಾಮರಾಜನಗರ |

ಸಾಕ್ಷಿಗೆ ದಿನಾಂಕಃ 28.03.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿಃ 18.02.20217 ರಿಂದ 30.06.2022 ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದೇನೆ. ದಿನಾಂಕಃ 26.06.2021 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ–1 ರವರು ಠಾಣೆಗೆ ಹಾಜರಾಗಿ ಒಬ್ಬ ಆಸಾಮಿ ಹಾಗೂ ಮಾಲನ್ನು ಮಹಜರ್ ನೊಂದಿಗೆ ಹಾಜರು ಪಡಿಸಿ ನೀಡಿದ ವರದಿಯೊಂದಿಗೆ ಸ್ವೀಕರಿಸಿ. ಆ ವರದಿಯನ್ನು ನೋಡಿ ಗುರುತಿಸಿದ್ದಾರೆ. ಆ ವರದಿಯನ್ನು ನಿಪಿ 4 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಠಾಣಾ ಅಪರಾಧ ಸಂಖ್ಯೆ 100/2021 ಪ್ರ.ವ.ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ ಆ ಪ.ವ.ವರದಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು 5(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಮಾಲುಗಳನ್ನು ಮಾಲುಪಟ್ಟಿ ಸಂಃ 112/2021 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ ಚಾಸಾ 2 ರಿಂದ 6 ಇವರ ಹೇಳಿಕೆಗಳನ್ನು ಬರೆದುಕೊಂಡೆ. 08.07.2021ರಂದು ಚಾಸಾ 1 ರವರು 7 ರವರ ಮುಖಾಂತರ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಮೈಸೂರಿನ RFSL ಗೆ ಕಳಿಸಿಕೊಟ್ಟಿದ್ದು. 09.07.2021 ಬಂದು ವರದಿ ಮಾಡಿದ್ದಾರೆ. ಅವರ ಹೇಳಿಕೆಯನ್ನು

ಬರೆದುಕೊಂಡಿದ್ದೇನು. SFL ವರದಿಯನ್ನು ಬರೆದುಕೊಂಡೆ . ಅದನ್ನು ಸಾಕ್ಷಿಗೆ ತೋರಿಸಲಾಗಿ ನೋಡಿ ಗುರುತಿಸಿದ್ದಾರೆ. ಅದನು ನಿಪಿ 6 ಎಂದು ಗುರುತಿಸಲಾಯಿತು. ಸಾಕಿ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ದಿಃ 12.08.2021 ರಂದು ಅಬಕಾರಿ ನಿರೀಕ್ಷಕರು ಚಾಮರಾಜನಗರ ವಶಪಡಿಸಿಕೊಂಡ ಮು.ಮಾಲುಗಳನ್ನು ಅವ ಮೂಲಕ ಕಳುಹಿಸಿಕೊಟ್ಟಿದ್ದೆನೆ .17.09.2021 ರಂದು ಅಂತಿಮ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ.ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ನೋಡಿ ಗುರುತಿಸಿದ್ದೇನೆ.

**ಪಾಟೀಸವಾಲುಃ ಆರೋಪಿಯ ಪರವಾಗಿ ಶ್ರೀ ಎಸ್. ಎಂ ವಕೀಲರಿಂದಃ**

ಚಾಸಾ 1 ನನ್ನ ಮೇಲಿನ ಅಧಿಕಾರಿ ಅನ್ನುವುದು ನಿಜ. ಆದ್ದರಿಂದ ಅವರ ಕಡೆಯಿದ ಸುಳ್ಳು ವರದಿಯನ್ನು ಪಡೆದುಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರಿಗೆ ಯಾವುದೇ ನೋಟಿಸನ್ನು ಕೊಟ್ಟಿಲ್ಲ. ಚಾಸಾ 4 ರಿಂದ 6 ನಮ್ಮ ಠಾಣೆಯ ಸಿಬ್ಬಂದಿಗಳು ಅನ್ನುವುದು ನಿಜ. ಆದ್ದರಿಂದ ಅವರ ಹೇಳಿಕೆಗಳನ್ನು ಯಾವ ರೀತಿ ಬೇಕು ಎಂದು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 6 ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಅಂತಿಮ ವರದಿಯನ್ನು ಹಾಕಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.